**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:16.10.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಚ್ ಎನ್ ಬಿ ಎನ್ ವಕೀಲರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಮತ್ತು ಪ್ರತಿವಾದಿಗಳು ನೆರೆಹೊರೆಯ ಗ್ರಾಮದವರು ಇರುತ್ತೇವೆ. ಸಾಕ್ಷಿ ಮುಂದುವರಿದು ನಾನು ಮತ್ತು ಪ್ರತಿವಾದಿಗಳು ಸ್ನೇಹಿತರು ಇರುತ್ತೇವೆ. ಪ್ರತಿವಾದಿಗಳ ತಾಯಿ ನಮ್ಮ ಊರಿನವರು ಇರುತ್ತಾರೆ. ಪ್ರತಿವಾದಿಗಳು ನನಗೆ 20 ವರ್ಷಗಳಿಂದ ಪರಿಚಯ ಇರುತ್ತಾರೆ. ಮೃತ 1 ನೇ ಪ್ರತಿವಾದಿಗೆ ಒಟ್ಟು 4 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರುಗಳು 2 ನೇ ಪ್ರತಿವಾದಿ, ಪ್ರತಿವಾದಿ ನಂ.1( ಎ) ಯಿಂದ 1(ಸಿ) ಇರುತ್ತಾರೆ ಎಂದರೆ ಸರಿ. ಸದರಿ 2 ನೇ ಪ್ರತಿವಾದಿ ಕೂಡಾ ಮೃತಪಟ್ಟಿದ್ದು ಪ್ರತಿವಾದಿ ನಂ.2( ಎ) ಯಿಂದ 1(ಸಿ) ಅವರ ವಾರಸುದಾರರು ಇರುತ್ತಾರೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಹಾಗಾಗಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಬರೆದುಕೊಟ್ಟ ಕ್ರಯದ ಕರಾರು ಪತ್ರದಂತೆ ಅವರು ನೋಂದಾಯಿತ ಕ್ರಯಪತ್ರ ಬರೆದುಕೊಡದ ಕಾರಣ ನಾನು ಅವರ ವಿರುದ್ಧಈ ದಾವೆ ಹೂಡಿರುತ್ತೇನೆ. ನನಗೆ ಕ್ರಯದ ಕರಾರು ಪತ್ರದಂತೆ ನಾನು ಖರೀದಿಸಲು ಮುಂದಾದ ದಾವಾ ಸ್ವತ್ತಿನ ಸರ್ವೆ ನಂಬರ್ ಈಗ ನೆನಪಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 17 ಗುಂಟೆ ಇರುತ್ತದೆ. ಸದರಿ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿ ಪಿ 1 ರಲ್ಲಿ ಸದರಿ ಸ್ವತ್ತು ಮಾರಾಟಗಾರರಿಗೆ ಪಿತ್ರಾರ್ಜಿವಾಗಿ ಬಂದ ಸ್ವತ್ತು ಇರುತ್ತದೆ ಎಂದು ಒಕ್ಕಣೆ ಇದೆ ಎಂದರೆ ಸರಿ. ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುವ ಕಾರಣ ಪ್ರತಿವಾದಿಗಳಿಗೆಲ್ಲರಿಗೂ ಕೂಡಾ ಸದರಿ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಪ್ರತಿವಾದಿ 1 ಮತ್ತು 2 ನೇರವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ನಿ ಪಿ 1 ಅನ್ನು ಮಾಕನಹಳ್ಳಿ ಸಿದ್ದೇಗೌಡರು ತಯಾರಿಸಿರುತ್ತಾರೆ. ಬೇವಿನಹಳ್ಳಿ ಗ್ರಾಮದ ಬಿ ಎನ್ ಪ್ರಕಾಶ ಮತ್ತು ಕೇತುಪುರ ಗ್ರಾಮದ ಪಾಂಡುರಂಗ ಅವರು ಸದರಿ ಕ್ರಯದ ಕರಾರು ಪತ್ರದ ಸಾಕ್ಷಿದಾರರು ಇರುತ್ತಾರೆ. ಸದರಿ ಸಾಕ್ಷಿದಾರರಿಬ್ಬರೂ ಕೂಡಾ ನನಗೆ ಆತ್ಮೀಯರು ಇರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಬಳಿ ರೂ. 1 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ನಾನು ಸಾಕ್ಷಿದಾರರು ಮತ್ತು ಪತ್ರ

ಬರಹಗಾರರು ಶಾಮಿಲಾಗಿ ನಿ ಪಿ 1 ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ತಾವು ಪಡೆದುಕೊಂಡ ಸಾಲಕ್ಕೆ 2 ವರ್ಷಗಳ ಕಾಲ ಮಾಹೆಯಾನ ಶೇ.2 ರಂತೆ ಬಡ್ಡಿ ಹಣವನ್ನು ನನಗೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಅವರಿಬ್ಬರೂ ಬದುಕಿದ್ದಾಗ ಅವರು ಹಣವನ್ನು ತೆಗೆದುಕೊಂಡು ಬಂದು ರಾಜಿ ಮಾಡಿಕೊಳ್ಳಲು ಮುಂದಾದರೂ ಕೂಡಾ ನಾನು ಅದಕ್ಕೆ ಒಪ್ಪಲಿಲ್ಲ ಎಂದರೆ ಸರಿಯಲ್ಲ. ನಿ ಪಿ 1 ನಾನು ಸೃಷ್ಟಿ ಸಿದ ದಾಖಲೆಯಿರುವ ಕಾರಣ ನಾನು ಯಾವುದೇ ಪರಿಹಾರಕ್ಕೂ ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**